407 (340) ಶ್ರೀ ಪಾಟೀಲ್ ಎಸ್ ಎಸ್ ಮಾನ್ಯ ಗೃಹ, ಕಾನೂನು, ನ್ಯಾಯ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ, ಮುಂಡರಗಿ ತಾಳ್ಲೂಕು, ಡಂಬಳ ಪೊಲೀಸ್ ಔಟ್ ಪೋಸ್ಟ್ ಅನ್ನು ಪೊಲೀಸ್ ರಾಣೆಯಾಗಿ ಮೇಲ್ದರ್ಜೆಗೇರಿಸಲಾಗುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).

ಅ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

408 (501) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) · ಮಾನ್ಯ ಶಿ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ರಸ್ತೆಗಳನ್ನು ಸರ್ಕಾರ ಗುರುತಿಸಿದೆಯೇ, ಹೌದಾದಲ್ಲಿ ಅಂತಹ ರಸ್ತೆಗಳಾವುವು,

ಆ) ಅತ್ಯಂತ ಜರೂರಾಗಿ ಗುರುವಾಯನ ಕೆರೆ–ಉಪ್ಪಿನಂಗಡಿ ಬೆಳ್ತಂಗಡಿ–ಬಂಗಾಡಿ–ಕಿಲ್ಲೂರು–ಕಾಜೂರು–ಮಡಂತ್ಯಾರು–ಬಳ್ಳಮಂಜಕಲ್ಲೇರಿ, ವೇಣೂರು–ಅಂಡಿಂಜೆ–ನಾರಾಕಿ,ನಿಡ್ಲೆ–ಕಾಯರ್ ತಡ್ಕ–ಪುದುವೆಟ್ಟು–ಸೆರಿಯ ಹಾಗೂ ಧರ್ಮಸ್ಥಳ–ಪೆರಿಯಡ್ಕ–ತೋಟತ್ತಾಡಿ–ಕಕ್ಕಂಜಿ ರಸ್ತೆಗಳನ್ನು ಮರು ಡಾಂಬರೀಕರಣಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿರಿಸಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವುದೇ,

ಇ) ಕಳೆದ ಮೂರು ವರ್ಷಗಳಿಂದ ಸಿ ಆರ್ ಎಫ್ ನಬಾರ್ಡ್ ಮತ್ತಿತರ ಯೋಜನೆಗಳ ಮೂಲಕ ಮಂಜೂರಾಗಿರುವ ಅಪೂರ್ಣವಾಗಿರುವ ರಸ್ತೆಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ರಸ್ತೆಗಳ ವಿವರಗಳು ಅನಬಂಧ–1 ರಲ್ಲಿ ಸಲ್ಲಿಸಿದೆ

ಆ) 1 ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ (ರಾಜ್ಯ ಹೆದ್ದಾರಿ–118) ಈ ರಸ್ತೆಯ ಒಟ್ಟು ಉದ್ದ 20 40 ಕಿಮೀ ರಸ್ತೆಯ ಅಂದಾಜು ಮೊತ್ತವಾದ ರೂ 1475 00 ಲಕ್ಷ ಅಭಿವೃದ್ಧಿ ಕಾಮಗಾರಿಯನ್ನು ಕೆ ಆರ್ ಡಿ ಸಿ ಎಲ್